## ಪ್ರಪಂಚದ ಎಲ್ಲೆಡೆಯೂ ವಾಸ

ಭಾರತವೂ ಸೇರಿದಂತೆ ಪ್ರಪಂಚದ ಎಲ್ಲಾ ಭಾಗಗಳಲ್ಲಿ ಹದ್ದುಗಳಿವೆ. ಉತ್ತರ ಅಮೆರಿಕದಲ್ಲಿ ಬೋಳು ಮತ್ತು ಗೋಲ್ಡನ್ ಹದ್ದುಗಳು, ದಕ್ಷಿಣ ಅಮೆರಿಕದಲ್ಲಿ ಹಾರ್ಪಿ ಹದ್ದುಗಳು, ಯೂರೋಪಿನಲ್ಲಿ ಬಿಳಿ ಬಾಲ ಮತ್ತು ಇಂಪೀರಿಯಲ್ ಹದ್ದುಗಳು, ಆಫ್ರಿಕಾದಲ್ಲಿ ಮಾರ್ಷಲ್ ಮತ್ತು ಮೀನು ಹದ್ದುಗಳು, ಏಷ್ಯಾದಲ್ಲಿ ಸ್ಟೆಲ್ಲರ್ಸ್ ಮತ್ತು ಫಿಲಿಪ್ಪೀನ್ಸ್ ಹದ್ದುಗಳು, ಆಸ್ಟ್ರೇಲಿಯಾದಲ್ಲಿ ಬೆಣೆ ಬಾಲದ ಹದ್ದುಗಳು ಮತ್ತು ಮಧ್ಯಪ್ರಾಚ್ಯದಲ್ಲಿ ಸ್ಟೆಪ್ಪೆ ಹದ್ದುಗಳು ಇವೆ. ಭಾರತದಲ್ಲಿ 8ಕ್ಕಿಂತ ಅಧಿಕ ವಿಧದ ಹದ್ದುಗಳಿದ್ದು, ದೊಡ್ಡ ಮತ್ತು ಸಣ್ಣ ಚುಕ್ಕೆ ಹದ್ದುಗಳು ಜೌಗು ಪ್ರದೇಶದಿಂದ ಹಿಡಿದು ಮರುಭೂಮಿಯವರೆಗೂ ಇವೆ.

ಹದ್ದುಗಳು ದೊಡ್ಡದಾದ, ಶಕ್ತಿಯುತವಾದ ರೆಕ್ಕೆ ಸ್ನಾಯುಗಳು ಮತ್ತು ವಿಶಾಲ ರೆಕ್ಕೆಗಳನ್ನು ಹೊಂದಿದ್ದು, ಅವುಗಳು ನಿರಂತರವಾಗಿ ಹಾರಲು ಶಕ್ತವಾಗಿವೆ. ಅವು ಬೇಟೆಯನ್ನು ಮಾಡಲು ಗಂಟೆಗೆ **160** ಕಿ.ಮೀ. ವೇಗದಿಂದ ಬಂದು ಭೂಮಿಯಿಂದ ಅಷ್ಟೇ ವೇಗದಿಂದ ಬೇಟೆಯನ್ನು ಹೊತ್ತು ಮೇಲೇರುತ್ತವೆ.



ಅತ್ಯಂತ ಪ್ರಿಯ ಆಹಾರವಾದ ಮೀನನ್ನು ಹದ್ದುಗಳು ಮನುಷ್ಯನಿಗಿಂತ **10**ರಷ್ಟು ಹೆಚ್ಚಿನ ಬಿಗಿಯಾಗಿ ತೀಕ್ಷ್ಣವಾದ ಉಗುರುಗಳ ನಡುವೆ ಹಿಡಿದು ಮೈಲುಗಟ್ಟಲೆ ಸಾಗಿ ಆರಾಮವಾಗಿ ಸವಿಯುತ್ತವೆ. ಆಕಾಶದ ಮಧ್ಯದಲ್ಲಿಯೇ ಇತರ ಪಕ್ಷಿಗಳ ಜೊತೆ ಕಾದಾಡಿ ಅವುಗಳು ಬೇಟೆಯಾಡಿದ ಆಹಾರವು ನೆಲಕ್ಕೆ ಬೀಳುವುದರೊಳಗೆ ಹಿಡಿದು ತಿನ್ನುತ್ತವೆ.



ಹದ್ದುಗಳು ಅತ್ಯುತ್ತಮ ದೃಷ್ಟಿ ಹೊಂದಿವೆ ಮತ್ತು ನೇರಳಾತೀತ ಬೆಳಕನ್ನು ಗ್ರಹಿಸಬಲ್ಲವು. ಆದರೆ ಇತರ ಯಾವುದೇ ಜೀವಿಗಳಂತೆ, ಸೂರ್ಯನನ್ನು ನೇರವಾಗಿ ಅವು ನೋಡುವುದಿಲ್ಲ ಮತ್ತು ಇದರಿಂದ ಅವುಗಳಿಗೆ ಇತರ ಪಶು ಪಕ್ಷಿಗಳಂತೆ ಹಾನಿಯಾಗುತ್ತದೆ.

ಹದ್ದು ಸಂಗಾತಿ ದೊರಕಿದ ಮೇಲೆ ಗೂಡು ಕಟ್ಟಲು ಸೂಕ್ತ ಸ್ಥಳ ಹುಡುಕುತ್ತವೆ. ಅವು ನೀರಿನ ಆಸರೆಯ ಸಮೀಪ ಮರದ ಮೇಲೆ **60–150** ಅಡಿ ಎತ್ತರದಲ್ಲಿ ವಿವಿಧ ಕಡ್ಡಿಗಳಿಂದ ನಿರ್ಮಿಸಿದ 'ಐರೀಸ್' ಎಂಬ ಗೂಡು ಕಟ್ಟುತ್ತವೆ ಮತ್ತು ಪ್ರತಿ ವರ್ಷ ಅದೇ ಗೂಡನ್ನು ಪುನರುಜ್ಜೀವನಗೊಳಿಸಿ ಅಲ್ಲಿಯೇ ತತ್ತಿ ಇಡುತ್ತವೆ. ಮರಿಗಳು ವಯಸ್ಸಿಗೆ ಬರುವುದು 4–5 ವರ್ಷ ಅವಧಿಗೆ.

ಹದ್ದುಗಳು ಬದ್ಧತೆ ಹೊಂದಿದ ಪಕ್ಷಿಗಳು. ಅನೇಕ ವರ್ಷಗಳ ಕಾಲ ಮತ್ತು ಜೀವಮಾನವಿಡೀ ತಮ್ಮ ಒಂದೇ ಸಂಗಾತಿಯೊಡನೆ ಜೀವಿಸುತ್ತವೆ. ಇಬ್ಬರಲ್ಲಿ ಒಬ್ಬರು ಸತ್ತು ವಿಧುರ ಅಥವಾ ವಿಧವೆಯಾದಲ್ಲಿ ಮಾತ್ರ ಅವು ಮತ್ತೊಂದು ವಿಧುರ ಅಥವಾ ವಿಧವೆ ಹದ್ದುಗಳ ಜೊತೆ ಗೆಳೆತನ ಬೆಳೆಸುತ್ತವೆ. ಮಿಲನ ಕಾಲದಲ್ಲಿ ಅವು ಒಂದರ ಉಗುರುಗಳನ್ನು ಮತ್ತೊಂದರ ಜೊತೆ ತಳುಕು ಹಾಕಿಕೊಂಡು ಆಕಾಶದಲ್ಲಿ ಗಿರಕಿ ಹಾಕುತ್ತಾ ಗಾಡಿ ಚಕ್ರ ಸುತ್ತುವಂತೆ ಸುತ್ತುತ್ತವೆ. ಇದನ್ನು 'ಆಕಾಶ ನರ್ತನ' ಎಂದು ಕರೆಯಲಾಗುತ್ತದೆ.

ಮನುಷ್ಯನ ಗಣಿಗಾರಿಕೆ ಚಟುವಟಿಕೆಗಳು, ಕೀಟನಾಶಕಗಳ ಉಪಯೋಗ, ಭಾರಿ ಶಬ್ದಗಳು, ಆಹಾರದ ಕೊರತೆ ಇತ್ಯಾದಿ ಹದ್ದುಗಳ ಸಂಖ್ಯೆ ಗಣನೀಯವಾಗಿ ಇಳಿಯಲು ಕಾರಣ.

ನೂರಿನ್ನೂರು ಮೀಟರ್ ಎತ್ತರದಲ್ಲಿ ಹಾರುವ ಹದ್ದುಗಳು ನೆಲದ ಮೇಲೆ ಓಡಾಡುವ ಪುಟ್ಟ ಇಲಿಯನ್ನೋ ಮೊಲವನ್ನೋ ಗುರುತಿಸುವುದು ಹೇಗೆ? ಅದಕ್ಕೊಂದು ವಿಶೇಷ ವ್ಯವಸ್ಥೆಯೇ ಇದೆ. ಅದರ ಕಣ್ಣುಗಳು ನಮ್ಮದರಂತಲ್ಲ. ದೂರದ ಯಾವುದೇ ಆಯ್ದ ಭಾಗವನ್ನು ಮಾತ್ರ ಅವು ನೂರು ಪಟ್ಟು ಝೂಮ್ ಮಾಡಿ ನೋಡಬಲ್ಲವು.

## ಹದ್ದಿನ ಬಗೆಗಿನ ಮಿಥ್ಯ

2007ರಲ್ಲಿ ಹದ್ದುಗಳ ಕುರಿತು ಒಂದು ಮಿಥ್ಯೆ ಸುದ್ದಿಯಲ್ಲಿತ್ತು. ಹದ್ದುಗಳಿಗೆ ಸುಮಾರು 30 ವರ್ಷ ವಯಸ್ಸಾದ ಮೇಲೆ ಅವುಗಳ ಕೊಕ್ಕುಗಳನ್ನು ಪರ್ವತದ ಮೇಲಿನ ಬಂಡೆಗಳಿಗೆ ನಿರಂತರ ಐದು ತಿಂಗಳಗಳ ಕಾಲ ಕುಕ್ಕಿಕೊಂಡು ಬೀಳಿಸಿಕೊಳ್ಳುತ್ತವೆ. ನಂತರ ಉಗುರನ್ನು ಒಂದಾದ ಮೇಲೊಂದರಂತೆ ಕಿತ್ತುಕೊಳ್ಳುತ್ತವೆ. ಎಲ್ಲಾ ರೆಕ್ಕೆಗಳನ್ನು ಕಿತ್ತುಕೊಳ್ಳುತ್ತವೆ. ಇದೊಂದು ಭಯಂಕರ ನೋವಿನ ಪ್ರಕ್ರಿಯೆ. ನಂತರ ಅವುಗಳಿಗೆ ಹೊಸ ಕೊಕ್ಕು, ಉಗುರು, ರೆಕ್ಕೆ ಮೂಡಿ ಅವು ಪುನಃ ಯೌವನ ಪಡೆದು ಉಳಿದ ಜೀವನ ಸಾಗಿಸುತ್ತವೆ ಎಂಬ ಕಥೆ ಹಬ್ಬಿತ್ತು. ಇದು ಶುದ್ಧ ಸುಳ್ಳು ಮತ್ತು ಇದಕ್ಕೆ ಯಾವುದೇ ವೈಜ್ಞಾನಿಕ ದಾಖಲೆ ಇಲ್ಲ. ಆದರೆ ಅವುಗಳ ರೆಕ್ಕೆಪುಕ್ಕಗಳು ಉದುರಿ ತಾನೇ ಮೂಡುವುದು ಸಹಜ ಕ್ರಿಯೆ.



